## ಮದ್ದಳೆ ಕಂಬಗಳು

ನಮ್ಮ ದೇಶದ ವೈವಿಧ್ಯಮಯ ಸಂಸ್ಕೃತಿಯನ್ನು ಪ್ರತಿನಿಧಿಸುವ ವಿಭಿನ್ನ ವಿನ್ಯಾಸದ ಮನೆಗಳ ಅಪರೂಪದ ಸಂಗ್ರಹ, ಉಡುಪಿ ಜಿಲ್ಲೆಯ ಮಣಿಪಾಲದ ಹಸ್ತ ಶಿಲ್ಪ ಹೆರಿಟೇಜ್ ವಿಲೇಜ್. ಇಲ್ಲಿ ದಿ. ವಿಜಯನಾಥ ಶೆಣೈಯವರು, ಅಪಾರ ಶ್ರಮವಹಿಸಿ 'ಸಂಗ್ರಹಿಸಿರುವ' ಪ್ರತಿಯೊಂದು ಮನೆಗಳೂ ಅತ್ಯಂತ ವಿಶಿಷ್ಟವಾಗಿವೆ. ಅದರಲ್ಲಿನ ಹರ್ಕೂರು ಒಳಗಿನ ಮನೆಯ ಕಂಬಗಳ ವಿನ್ಯಾಸವಂತೂ ಅತ್ಯಪೂರ್ವ. ಸುಮಾರು 415 ವರ್ಷಗಳಷ್ಟು ಹಿಂದಿನ, ಕುಂದಾಪುರದ ಸಮೀಪದ ಹಾರ್ಕೂರು ಎಂಬ ಹಳ್ಳಿಯ ಈ ಕೃಷಿ ಪ್ರಧಾನ ಮನೆಯಲ್ಲಿನ ಮುಂಭಾಗದ ಜಗಲಿಯಲ್ಲಿರುವ, ಸಂಗೀತ ವಾದ್ಯ, ಮದ್ದಳೆಯ ರೀತಿಯಲ್ಲಿರುವ ಕಂಬಗಳು ನೋಡುಗರನ್ನು ಮಂತ್ರಮುಗ್ಧವಾಗಿಸುತ್ತವೆ. ಇದು ನಮ್ಮ ಹಿಂದಿನ ತಲೆಮಾರಿನವರ ಸೃಜನಶೀಲತೆ ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಗೆ ಹಿಡಿದ ಕನ್ನಡಿಯಾಗಿದೆ. ಇದೇ ಮನೆಯಲ್ಲಿ ಸಂಗ್ರಹಿಸಿ ಇಟ್ಟಿರುವ ಕರಾವಳಿ ಭಾಗದ ಕೃಷಿಕ ಜಾನಪದರು ಬಳಸುತ್ತಿದ್ದ ಅಪರೂಪದ ಕೃಷಿ ಉಪಕರಣಗಳು ಹಾಗೂ ಒಳಭಾಗದಲ್ಲಿ ಸಂಗ್ರಹಿಸಿರುವ ವಿಭಿನ್ನ ಚಿತ್ರಕಲಾ ಕೃತಿಗಳು ಸಹಾ ಅತ್ಯಂತ ವಿಶಿಷ್ಟವಾಗಿವೆ.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ





## ಬಾಳೆ ಬೆಳಗಿದ ದೀಪ

'ಪರೋಪಕಾರಾರ್ಥಂ ಇದಂ ಶರೀರಂ' ಎಂಬುದಕ್ಕೆ ಬಾಳೆ ಅತ್ಯುತ್ತಮ ನಿದರ್ಶನ. ಸಸ್ಯ ವರ್ಗದ ಮುಸಾಸೆ (Musaceae ) ಕುಟುಂಬಕ್ಕೆ ಸೇರಿದ ಬಾಳೆಯ ಎಲೆ, ಹೂವು, ಮೂತಿ, ಕಾಯಿ, ಹಣ್ಣು, ದಿಂಡು ಎಲ್ಲವೂ ಹಲವು ವಿಧದಿಂದ ಉಪಯೋಗಕಾರಿಯಾಗಿವೆ. ಔಷಧೀಯ ಗುಣಗಳನ್ನು ಹೊಂದಿರುವ ಬಾಳೆಯ ಬೇರು ಮತ್ತು ಹೊರ ತೊಗಟೆಯನ್ನು ಹೊರತುಪಡಿಸಿ ಉಳಿದ ಭಾಗಗಳೆಲ್ಲವೂ ಆಹಾರ ಖಾದ್ಯ ಪದಾರ್ಥಗಳಾಗಿ ಬಳಸಲ್ಪಡುವುದರೊಂದಿಗೆ ಧಾರ್ಮಿಕ ಸಾಂಸ್ಕೃತಿಕ ಮಹತ್ವ ಪಡೆದುಕೊಂಡಿರುವುದು ವಿಶೇಷ.

ಕರ ಕೌಶಲ್ಯದಿ ಸುಂದರ ತೋರಣ ಮಂಟಪಗಳಾಗಿ ಅರಳಿ ಕಣ್ಮನ ಸೆಳೆಯುವ ಬಾಳೆ ದಿಂಡಿನಲ್ಲಿ ದೀಪಗಳನ್ನು ಬೆಳಗಿಸಿ ಗಂಗಾ ಪೂಜೆ ಮಾಡುವ ಪದ್ಧತಿಯಿದೆ. ಶೃಂಗೇರಿಯ 'ತುಂಗಾ ಪುಷ್ಕರಿಣಿ' ಮಹೋತ್ಸವದ ಸಂದರ್ಭದಲ್ಲಿ ಬಾಳೆ ದಿಂಡಿನ ಆಕರ್ಷಕ ವಿನ್ಯಾಸದಿ ದೀಪಗಳನ್ನು ಬೆಳಗಿಸಿ ತುಂಗೆಯಲ್ಲಿ ತೇಲಿ ಬಿಡುವ ದೃಶ್ಯ ಕಂಡುಬರುವುದು.

—ಎಸ್.ಎನ್. ಚಂದ್ರಕಲಾ ಕೊಪ್ಪ, ಹಲ್ಲುಮಕ್ಕಿ

## ಅಪರೂಪದ ತಾಳೆಗ್ರಂಥ



ತಾಳೆಪತ್ರೆಯಲ್ಲಿ ಬರೆಯಲಾದ ಈ ಪತ್ರವು ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಸುಮಾರು 200 ಪುಟಗಳನ್ನೊಳಗೊಂಡ ಈ ಗ್ರಂಥದ ರಕ್ಷಾಪುಟವು ಗಟ್ಟಿಯಾದ ಮರದಿಂದ ತಯಾರಿಸಲಾಗಿದ್ದು, ಗಟ್ಟಿಯಾಗಿ ಇನ್ನೂ ಹಲವು ವರ್ಷಗಳು ಸುವ್ಯವಸ್ಥಿತವಾಗಿ ಇರುವಂತೆ ಕಾಣುತ್ತಿವೆ. ಆತ್ಮೀಯರೊಬ್ಬರ ಮನೆಯ ಅಟ್ಟವನ್ನು (ಮನೆಯಮಾಳಿಗೆ) ಸ್ವಚ್ಛಗೊಳಿಸುವಾಗ ದೊರಕಿದ ಈ ಗ್ರಂಥವು ಅಧ್ಯಯನಕ್ಕೆ ಯೋಗ್ಯವಾಗಿದೆ. ಈ ತಾಳೆಗ್ರಂಥವನ್ನು ಅಧ್ಯಯನ ಮಾಡಬಯಸುವ ಆಸಕ್ತರು ಸಂಪರ್ಕಿಸಬಹುದು. (9496297042)

—ಹರಿಭಟ್ ಪೆಲ್ತಾಜೆ

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly